






ಪ್ರವಾಸಿಗರು ಬರಲಿ ಎಂಬ ಕಾರಣಕ್ಕೆ ಮಾವ್ಲೋಲಿನೊಂಗ್‌ನ ಜನರು ತಮ್ಮ ಊರನ್ನು ಸ್ವಚ್ಛವಾಗಿರಿಸಿಕೊಳ್ಳಲಿಲ್ಲ ಎಂಬುದು ಗಮನಾರ್ಹ. ಅಂದ ಹಾಗೆ ಈ ಹಳ್ಳಿಯಲ್ಲಿರುವವರು ಭಾರೀ ವಿದ್ಯಾವಂತರೇನಲ್ಲ; ಆದರೂ ಅವರ ನಾಗರಿಕ ಪ್ರಜ್ಞೆಗೆ ನಾವು ಸಲಾಂ ಹೇಳಲೇಬೇಕು. ಇಡೀ ಹಳ್ಳಿಯನ್ನು ಸುತ್ತಿದರೂ ಒಂದೇ ಒಂದು ಪ್ಲಾಸ್ಟಿಕ್ ತ್ಯಾಜ್ಯ ಕಾಣ ಸಿಗದು. ಅಷ್ಟೇ ಅಲ್ಲ; ಈ ಹಳ್ಳಿಯಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿಸಿ ಪುನರ್ಬಳಕೆ ಮಾಡಲಾಗುತ್ತದೆ. ಜೊತೆಗೆ ಮಳೆ ನೀರಿನ ಕೊಯ್ಲಿನ ಪ್ರಜ್ಞೆ ಕೂಡಾ ಈ ಜನರಿಗಿದೆ.

2003ರಲ್ಲಿ ಮಾವ್ಲೋಲಿನೊಂಗ್ 'ಕ್ಲೀನೆಸ್ಟ್ ವಿಲೇಜ್' ಎಂಬ ಗೌರವಕ್ಕೆ ಪಾತ್ರವಾದ ನಂತರ, ಇಲ್ಲಿನ ಚಿತ್ರಣವೇ ಬದಲಾಗಿದೆ. ಹಾಗೆ ನೋಡಿದರೆ, ಪ್ರವಾಸಿಗರು ಬರುವುದರಿಂದಾಗಿ ಈ ಹಳ್ಳಿಯ ಜನರು ಇನ್ನಷ್ಟು ಜಾಗೃತರಾಗಿದ್ದಾರೆ. ಅಲ್ಲಿನ ಸಾಂಪ್ರದಾಯಿಕ ವಸ್ತು, ತಿನಿಸುಗಳನ್ನು ಮಾರಲು ಮನೆಯ ಅಂಗಳವನ್ನೇ ಅಂಗಡಿಯನ್ನಾಗಿಸಿ ಕೊಂಡಿದ್ದಾರೆ. ಅಲ್ಲೇ ಎಷ್ಟೇ ಪ್ರವಾಸಿಗರಿರಲಿ, ಅವರನ್ನು ಗೋಗರೆದು ಕರೆಯುವುದಾಗಲಿ, ವಸ್ತುಗಳನ್ನು ಖರೀದಿಸಲು ಒತ್ತಾಯಿಸುವುದಾಗಲೀ ಕಾಣದು. ಹಾಗಾಗಿಯೇ ಮಾವ್ಲೋಲಿನೊಂಗ್‌ನಲ್ಲಿ ವಿಚಿತ್ರವಾದ ಮೌನ ಆವರಿಸಿಕೊಂಡಿರುತ್ತದೆ.

ಅಂದ ಹಾಗೆ, ಇಲ್ಲಿ ಮೊಬೈಲ್ ನೆಟ್‌ವರ್ಕ್ ಸಿಗುವುದಿಲ್ಲ. ಹಾಗಾಗಿ ಇಲ್ಲಿನ ಸೌಂದರರ್ಯವನ್ನು ಮನಸೋ ಇಚ್ಛೆ ಸವಿಯಬಹುದು. ಛಾಯಾಗ್ರಾಹಕರಿಗಂತೂ ಮಾವ್ಲೋಲಿನೊಂಗ್ ಖಂಡಿತ ನಿರಾಸೆ ಮಾಡದು. ಖಾಸಿ ಬುಡಕಟ್ಟು ಜನರ ಭಾಷೆಯಲ್ಲಿ ಮಾವ್ಲೋಲಿನೊಂಗ್ ಅಂದರೆ, ಕಲ್ಲುಗಳ ರಾಶಿ ಅಂತೆ! ನಮ್ಮಲ್ಲಿ ಕಲ್ಲು ಗುಡ್ಡೆ ಅಂತಾರಲ್ಲ ಆ ಅರ್ಥವಿರಬಹುದೇನೋ!

ಮೇಘಾಲಯಕ್ಕೆ ಬರುವ ವಿದೇಶಿ ಪ್ರವಾಸಿಗರಿಗೂ ಮಾವ್ಲೋಲಿನೊಂಗ್ ಅಚ್ಚುಮೆಚ್ಚಿನ ತಾಣ. ಇತ್ತೀಚೆಗೆ ಅವರ ಹಳ್ಳಿಯನ್ನು ನೋಡೋದಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗುತ್ತಿರುವುದಕ್ಕೆ ಅಲ್ಲಿನವರಿಗೆ ಹೆಮ್ಮೆಯಿದೆ. ಅವರ ಜವಾಬ್ದಾರಿಯೂ ಹೆಚ್ಚಾಗಿದೆ. ಹಾಗಾಗಿಯೇ ಅಲ್ಲಿನ ಪ್ರವಾಸೋದ್ಯಮ ಇಲಾಖೆ ಕೂಡಾ ಸ್ಥಳೀಯರ ಸಮಿತಿಯೊಂದನ್ನು ಮಾಡಿ ಪ್ರವಾಸಿಗರಿಗೆ ಬೇಕಾಗುವ ವ್ಯವಸ್ಥೆಗಳನ್ನು ಕಲ್ಪಿಸುವ ಕ್ರಮ ಕೈಗೊಂಡಿದೆ. ಮಾವ್ಲೋಲಿನೊಂಗ್‌ನ ಭೇಟಿ ಮಾತ್ರ ಒಂದು ಅವಿಸ್ಮರಣೀಯ ಅನುಭವ.